## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ : 14-08-2022

### ಮಂಠಾಳಾ ಪೊಲೀಸ್ ಠಾಣೆ ಯು.ಡಿ.ಆರ್ ಸಂಖ್ಯೆ: 09/2022 ಕಲಂ. 174 ಸಿಆರ್‌ಪಿಸಿ :-

ದಿನಾಂಕ 13-08-2022 ರಂದು ಬೆಳಗ್ಗೆ 10:00 ಗಂಟೆಗೆ ಶ್ರೀ ಧೂಳಪ್ಪಾ ತಂದೆ ರಾಮಚಂದ್ರ ನಾಟಿಕರ ವಯ|| 60 ವರ್ಷ ಜಾ|| ಕಬ್ಬಲಿಗ ಉ|| ಕೂಲಿ ಕೇಲಸ ಸಾ|| ಗಿಲಿಗಿಲಿ ತಾ|| ಬಸವಕಲ್ಯಾಣ ರವರು ಮಂಠಾಳ ಪೊಲೀಸ್ ಠಾಣೆಗೆ ಹಾಜರಾಗಿ ದೂರು ಹಾಜರುಪಡಿಸಿದ್ದು  ಸಾರಾಂಶವೆನೆಂದರೆ ನಮಗೆ 01] ರಾಮಚಂದ್ರ ವಯ|| 33 ವರ್ಷ, 02] ರಾಜೆಶ್ರೀ ವಯ|| 30 ವರ್ಷ, 03] ಮಹೇಶ್ವರಿ ವಯ|| 28 ವರ್ಷ, 04] ಶೈಲಮ್ಮಾ ವಯ|| 26 ವರ್ಷ, 05] ಶಕುಂತಲಾ ವಯ|| 21 ವರ್ಷ ಅಂತ ಮಕ್ಕಳು ಇದ್ದು, ನಮ್ಮ ಮಕ್ಕಳು ಕೂಲಿ ಕೇಲಸ ಮಾಡಿಕೊಂಡಿರುತ್ತಾರೆ. ಹೀಗಿರುವಾಗ ದಿನಾಂಕ 12/08/2022 ರಂದು ಬೆಳಗ್ಗೆ 11:30 ಗಂಟೆಯ ಸುಮಾರಿಗೆ ನಮ್ಮ ಹೆಣ್ಣು ಮಕ್ಕಳಾದ ಮಹೇಶ್ವರಿ ಮತ್ತು ಶಕುಂತಲಾ ಇವರೀಬ್ಬರು ಕೂಲಿ ಕೇಲಸಕ್ಕೆಂದು ಮನೆಯಿಂದ ಹೊದರು ನಂತರ ಮದ್ಯಾಹ್ನ 12:45 ಗಂಟೆಯ ಸುಮಾರಿಗೆ ನಮ್ಮ ಹಿರಿಯ ಮಗಳಾದ ಮಹೇಶ್ವರಿ ಇವಳು ಮನೆಗೆ ಬಂದು ನಮಗೆ ತಿಳಿಸಿದ್ದೆನೆಂದರೆ ನಾನು ಮತ್ತು ನಮ್ಮ ತಂಗಿ ಶಕುಂತಲಾ ಇಬ್ಬರು ಇಂದು ಬೆಳಗ್ಗೆ 11:45 ಗಂಟೆಯ ಸುಮಾರಿಗೆ ನಮ್ಮ ಊರ ಪಕ್ಕದಲ್ಲಿರುವ ಬೆಣ್ಣೆತೊರೆ ಹಳ್ಳದ ನೀರು ದಾಟುತ್ತಿರುವಾಗ ಹಳ್ಳದ ನೀರಿನ ರಭಸಕ್ಕೆ ನಮ್ಮ ತಂಗಿ ಶಕುಂತಲಾ ಇವಳು ನೀರಿನ ಹಳ್ಳದಲ್ಲಿ ಕೊಚ್ಚಿಕೊಂಡು ನೀರಿನಲ್ಲಿ ಮುಳಗಿದ್ದು ಇರುತ್ತದೆ ಅಂತಾ ತಿಳಿಸಿದಾಗ ನಾನು ಮತ್ತು ನಮ್ಮ ಗ್ರಾಮದ ಕೇಲವು ಜನ ಕೂಡಿಕೊಂಡು ನಮ್ಮ ಊರ ಪಕ್ಕದಲ್ಲಿರುವ ಬೆಣ್ಣೆತೊರೆ ಹಳ್ಳದ ನೀರಿನಲ್ಲಿ ನಮ್ಮ ಮಗಳು ಶಕುಂತಲಾ ಇವಳಿಗೆ ಹುಡಕಾಡಿದರು ಸಿಗಲಿಲ್ಲಾ ನಂತರ ಅಗ್ನಿಶಾಮಕ ದಳ ಬಸವಕಲ್ಯಾಣ ಮತ್ತು ಎಸ್‌ಡಿಆರ್‌ಎಫ್ ಕಲಬುರಗಿಯವರು ಹುಡಕಾಡಿದರು ನಮ್ಮ ಮಗಳು ಪತ್ತೆಯಾಗಲಿಲ್ಲಾ ನಂತರ ದಿನಾಂಕ 13/08/2022 ರಂದು ಬೆಳಗ್ಗೆ 08:00 ಗಂಟೆಯ ಸುಮಾರಿಗೆ ನಮ್ಮ ಮಗಳಾದ ಶಕುಂತಲಾ ಇವಳ ಮೃತದೇಹ ಸದರಿ ನಮ್ಮ ಊರ ಪಕ್ಕದಲ್ಲಿರುವ ಬೆಣ್ಣೆತೊರೆ ಹಳ್ಳದ ನಿರಿನಲ್ಲಿ ತೆಲಾಡುತ್ತಿರುವುದು ಕಂಡುಬಂತು ಆಗ ಎಸ್‌ಡಿಆರ್‌ಎಫ್ ತಂಡ ಸದರಿ ಮೃತದೇಹವನ್ನು ನೀರಿನಿಂದ ಹಳ್ಳದ ದಂಡೆಗೆ ತಂದಿದ್ದು ಅವಳ ಮೃತದೇಹವನ್ನು ಖಾಸಗಿ ವಾಹನದಲ್ಲಿ ಹಾಕಿಕೊಂಡು ಬಸವಕಲ್ಯಾಣ ಸರಕಾರಿ ಆಸ್ಪತ್ರೆಗೆ ತಂದಿದ್ದು ಇರುತ್ತದೆ. ಈ ಘಟನೆಯು ಮಳೆಯು ಹೆಚ್ಚಾಗಿದ್ದರಿಂದ ನೀರಿನ ರಭಸಕ್ಕೆ ಉಂಟಾಗಿರುತ್ತದೆ. ದಿನಾಂಕ 12/08/2022 ರಂದು

ಬೆಳಗ್ಗೆ 11:45 ಗಂಟೆಯ ಸುಮಾರಿಗೆ ನಮ್ಮ ಮಗಳಾದ ಶಕುಂತಲಾ ಇವಳು ಭಾಲಖೇಡ ಗ್ರಾಮದ ಮಲ್ಲಣ್ಣಾ ರವರ ಹೊಲದಲ್ಲಿ ಕೂಲಿ ಕೇಲಸಕ್ಕೆ ಹೊಗುತ್ತಿರುವಾಗ ದಾರಿಯಲ್ಲಿರುವ ಬೆಣ್ಣೆತೊರೆ ಹಳ್ಳ ದಾಟುತ್ತಿರುವಾಗ ನೀರಿನ ರಭಸಕ್ಕೆ ಅಕಸ್ಮೀಕವಾಗಿ ನಮ್ಮ ಮಗಳು ಶಕುಂತಲಾ ಇವಳು ಕೊಚ್ಚಿಕೊಂಡು ಹೋಗಿ ನೀರಿನಲ್ಲಿ ಮುಳಗಿ ಮೃತಪಟ್ಟಿರುತ್ತಾಳೆ ಕಾರಣ ಇವಳ ಸಾವಿನಲ್ಲಿ ಯಾರ ಮೇಲೆ ಯಾವುದೆ ರೀತಿಯಾದ ಸಂಶಯ ಇರುವುದಿಲ್ಲಾ. ಇದರ ಬಗ್ಗೆ ಕಾನೂನು ಕ್ರಮಕೈಗೊಳ್ಳಲು ವಿನಂತಿ ಇರುತ್ತದೆ. ಅಂತಾ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

**ಬೀದರ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 0041/2022 ಕಲಂ 307, 323, 324, 504, 506 ಐಪಿಸಿ :-**

ದಿನಾಂಕ 13/08/2022 ರಂದು ರಾತ್ರಿ 23:30 ಗಂಟೆಗೆ ಬೀದರ ಜಿಲ್ಲಾ ಆಸ್ಪತ್ರೆಯಿಂದ ಎಂ.ಎಲ್.ಸಿ ಮಾಹಿತಿ ಬಂದ ಮೇರೆಗೆ ಆಸ್ಪತ್ರೆಗೆ ಹೋಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಶ್ರೀ ಪ್ರಶಾಂತಕುಮಾರ ತಂದೆ ಪಾಂಡುರಂಗ ಮೇತ್ರೆ ವಯ:24 ವರ್ಷ ಉ:ವಾಟರ್ ಸರ್ವಿಸಿಂಗ್ ಕೆಲಸ ಸಾ: ಮನೆ ನಂ 7-3-58 ಭೀಮ ನಗರ ಬೀದರ ರವರ ಹೇಳಿಕೆ ಪಡೆದುಕೊಂಡಿದ್ದು ಸದರಿ ಹೇಳಿಕೆ ಸಾರಾಂಶವೆನೆಂದರೆ ದಿನಾಂಕ 13/04/2022 ರಂದು ನಮ್ಮ ಓಣಿಯ ಹರೀಶ ತಂದೆ ಭಗವಾನ ಲಕ್ಕಿ ಇವನು ತನ್ನ ಮೊಟಾರ ಸೈಕಲ್ ಅತೀ ವೇಗವಾಗಿ ಗಲ್ಲಿಯಲ್ಲಿ ಓಡಿಸಿದಕ್ಕೆ ನನ್ನ ತಮ್ಮ ಪ್ರಶಾಂತ ಇವನು ಕೇಳಿದಕ್ಕೆ ಅವನು ನನ್ನ ತಮ್ಮನಿಗೆ ಬೆದರಿಸಿ ಹೋಗಿದ್ದು ಅವಾಗಿನಿಂದ ನನ್ನ ತಮ್ಮನಿಗೆ ಮತ್ತು ನನಗೆ ನೋಡಿದಾಗಲೆಲ್ಲಾ ಘುರಾಯಿಸಿ ನೋಡುವುದು ನಿಮಗೆ ಬಿಡುವುದ್ದಿಲ್ಲಾ ಬೆದರಿಸುವುದು ಮಾಡುತ್ತಿದ್ದನ್ನು. ಹಿಗಿದ್ದು ದಿನಾಂಕ 13/08/2022 ರಂದು ರಾತ್ರಿ 10:30 ಪಿ.ಎಂ ಗಂಟೆ ಸುಮಾರಿಗೆ ನಾನು ಮೆಡಿಕಲ್ ದಿಂದ ಮನೆಗೆ ಹೋಗುವಾಗ ನಮ್ಮ ಮನೆಯ ಎದುರುಗಡೆ ಸದರಿ ಹರೀಶ ಲಕ್ಕಿ ತಂದೆ ಭಗವಾನ ಲಕ್ಕಿ ವಯ:31 ವರ್ಷ 2) ದಿಕ್ಷಿತ @ ಗುಂಡು ಮತ್ತು 3) ಸಾಯಿ ರವರು ಮೊಟಾರ ಸೈಕಲ್ ಮೇಲೆ ಮಾತಾಡುತ್ತಾ ನಿಂತಿದ್ದರು ಆಗ ಹರೀಶ ಲಕ್ಕಿ ಇವನು ನನ್ನಗೆ ಇಲ್ಲಿ ಬಾಗೇ ಸೂಳೆ ಮಗನೆ ಅಂತ ಅಂದು ಕೈ ಮುಷ್ಟಿ ಮಾಡಿ ಬಾಯಿ ಮೇಲೆ ಹೊಡೆದನು ನನಗೆ ನುಕಿಸಿಕೊಟ್ಟಿದರಿಂದ ನನ್ನ ಬಲಗಾಲ ಮೊಳಕಾಲ ಮೇಲೆ ತರಚೀದ ಗಾಯವಾಗಿರುತ್ತದೆ ಆಗ ಸದರಿ ಘಟನೆಯನ್ನು ನೋಡಿ ಮನೆಯಿಂದ ನನ್ನ ತಮ್ಮನಾದ ಪ್ರಶಾಂತ ಇವನು ಜಗಳ ಬಿಡಿಸಲು ಬಂದಾಗ ಹರೀಶ ಲಕ್ಕಿ ಇವನು ತನ್ನ ಹತ್ತಿರ ಇದ್ದ ಚಾಕುದಿಂದ ನನ್ನ ತಮ್ಮನ ಎಡಗೈ ರಟ್ಟೆಯ ಮೇಲೆ ಹೊಡೆದು ಭಾರಿ ರಕ್ತಗಾಯ ಪಡಿಸಿರುತ್ತಾನೆ ಆಗ ನಾನು

ಬಿಡಿಸಲು ಹೋದಾಗ ಅದೇ ಚಾಕುದಿಂದ ನನ್ನ ಕೊಲೆ ಮಾಡುವ ಉದ್ದೇಶದಿಂದ ನನ್ನ ಹೊಟ್ಟೆಯಲ್ಲಿ ಹೊಡೆಯುವಾಗ ನಾನು ತಪ್ಪಿಸಿಕೊಂಡಿದ್ದರಿಂದ ನನ್ನ ಎಡಗಡೆ ಕಟ್ಟಾದ, ತರಚೀದ, ಗಾಯವಾಗಿರುತ್ತದೆ. ನಾನು ತಪ್ಪಿಸಿಕೊಳ್ಳದಿದ್ದರೆ ನನ್ನ ಹೊಟ್ಟೆಯಲ್ಲಿ ಚಾಕು ಜೊರಾಗಿ ತಾಕಿ ನನ್ನ ಜೀಪ ಹೋಗುತ್ತಿತ್ತು ಸದರಿ ಘಟನೆಯನ್ನು ನೋಡಿ ನನ್ನ ತಾಯಿ ರೇಣುಕಾ ರವರು ಬಂದು ಬಿಡಿಸಿಕೊಂಡಿರುತ್ತಾರೆ. ಆಗ ಹರೀಶ ಲಕ್ಕಿ ಇವನ ಜೊತೆಯಲ್ಲಿ ದಿಕ್ಷೀತ @ ಗುಂಡು ಮತ್ತು ಸಾಯಿ ರವರಿಗೆ ಅವನಿಗೆ ಕರೆದುಕೊಂಡು ಹೋಗಿರುತ್ತಾರೆ. ಅವರ ವಿರುದ್ದ ಕಾನೂನು ಕ್ರಮ ಜರುಗಿಸಲು ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಕಮಲನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 0076/2022 ಕಲಂ. 323, 324, 504, 498(ಎ) ಐಪಿಸಿ :-**

ದಿನಾಂಕ 13/08/2022 ರಂದು 1600 ಗಂಟೆಗೆ ಫಿರ್ಯಾದಿ ಮಹಾದೇವಿ ಗಂಡ ಪರಮೇಶ್ವರ ತೊಗಲೂರೆ ವಯ 26 ವರ್ಷ ಜ್ಯಾತಿ ಲಿಂಗಾಯತ ಉ// ಮನೆಕೆಲಸ ಮು// ಸೊನಾಳ ಗ್ರಾಮ ರವರು ಠಾಣೆಗೆ ಹಾಜರಾಗಿ ದೂರಿನ ಸಾರಾಂಶವೇನೆಂದರೆ ನನ್ನ ತಂದೆ ತಾಯಿ ದಿನಾಂಕ 15/03/2015 ರಂದು ಸೊನಾಳ ಗ್ರಾಮದ ಪರಮೇಶ್ವರ ತಂದೆ ರಾಜೆಪ್ಪಾ ತೊಗಲೂರೆ ವಯ 32 ವರ್ಷ ಜ್ಯಾತಿ ಲಿಂಗಾಯತ ಉ// ವ್ಯಾಪಾರ ಸಾ// ಸೊನಾಳ ಇತನ ಜೊತೆ ಮದುವೆ ಮಾಡಿಕೊಟ್ಟಿದ್ದು ಇರುತ್ತದೆ. ನನ್ನಗೆ ಮದುವೆಯಾದಾಗಿನಿಂದ ನನ್ನ ಗಂಡ ನನಗೆ ದಿನಾಲು ಹೊಡೆಯುವುದು , ರಂಡಿ ಸೂಳಿ ಅಂತಾ ಬೈಯುವುದು, ನಿನಗೆ ಅಡುಗೆ ಸರಿಯಾಗಿ ಮಾಡಲು ಬರುವುದಿಲ್ಲಾ ಅಂತಾ ಬೈಯುವುದು ಮಾಡುತ್ತಾ ಇರುತ್ತಾನೆ. ಇವುಗಳ ಮಧ್ಯ ನಮ್ಮಿಬ್ಬರಿಗೆ ಒಂದು ಗಂಡು ಮಗು ಒಂದು ಹೆಣ್ಣು ಮಗು 1) ರಕ್ಷಿತ ವಯ 5 ವರ್ಷ 2) ವೈಶ್ಯಾಲಿ ವಯ 3 ವರ್ಷ ಅಂತಾ ಇರುತ್ತಾರೆ. ಹಿಗೀರುವಲ್ಲಿ ಇಂದು ದಿನಾಂಕ 13/08/2022 ರಂದು 1000 ಗಂಟೆಗೆ ನಮ್ಮ ಮನೆಯ ಮುಂದೆ ನನಗೆ ಕಲ್ಲಿನಿಂದ ತಲೆಯಲ್ಲಿ ಹೊಡೆದು ಗುಪ್ತಗಾಯ ಪಡಿಸಿದ್ದು , ಕುತ್ತಿಗೆ ಒತ್ತಿದ್ದು , ಕೈಯಿಂದ ಹೊಟ್ಟೆಯಲ್ಲಿ, ಬೆನ್ನಲ್ಲಿ ಹೊಡೆದಿದ್ದು ಅಲ್ಲದೆ ಬಿಡಿಸಲು ಬಂದ ನಮ್ಮ ಅತ್ತೆಯಾದ ಶೋಭಾ ಗಂಡ ರಾಜೆಪ್ಪಾ ತೊಗಲೂರೆ ವಯ 58 ವರ್ಷ ಇವರಿಗು ಕೂಡಾ ಬೆನ್ನಲ್ಲಿ ಕೈಯಿಂದ ಹೊಡೆದು ನೂಕಿ ಕೊಟ್ಟಿದ್ದು ಇರುತ್ತದೆ. ಈ ಘಟನೆ ಅಲ್ಲೆ ಇದ್ದ ವಿಜಯಕುಮಾರ ತಂದೆ ಬಾಬುರಾವ ಕೌಡಗಾಂವೆ , ಸೋಮನಾಥ ತಂದೆ

ಗುಂಡಪ್ಪಾ ಅಳ್ಳೆ ಇವರು ನೋಡಿದ್ದು ಈ ಬಗ್ಗೆ ಕಾನೂನು ಕ್ರಮ ಕೈಕೊಳ್ಳಲು ವಿನಂತಿ ಇರುತ್ತದೆ. ಅಂತ ನೀಡಿದ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಮಹಿಳಾ ಪೊಲೀಸ ಠಾಣೆ ಬೀದರ ಪ್ರಕರಣ ಸಂಖ್ಯೆ: 50/2022 ಕಲಂ 498(ಎ), 323, 504, 506 ಜೊತೆ 149 ಐಪಿಸಿ :-**

ದಿನಾಂಕ: 13-08-2022 ರಂದು 1420 ಗಂಟೆಗೆ ಫಿರ್ಯಾದಿದಾರಳಾದ ರತ್ನಪ್ರಭಾ ಗಂಡ ಸಂಗಮೇಶ ಚೆಟ್ನಾ¼ ಸಾ: ಕೆ.ಇ.ಬಿ. ಕಾಲೋನಿ ಗುಂಪಾ ನಂದಿ ಕಾಲೋನಿ ಬೀದರ. ಇವರು ಠಾಣೆಗೆ ಹಾಜರಾಗಿ ದೂರು ಅರ್ಜಿಯನ್ನು ಸಲ್ಲಿಸಿದ್ದು ಅರ್ಜಿಯ ಸಾರಂಶವೆನೆಂದರೆ, ನನ್ನ ಮದುವೆಯು ದಿಲೀಪ್ ತಂದೆ ತಮ್ಮಣ್ಣ ಚಟ್ನಾಳೆ ಇವರ ಮಗನಾದ ಸಂಗಮೇಶ ಇವರ ಜೊತೆಯಲ್ಲಿ ದಿನಾಂಕ: 05-03-2017 ರಲ್ಲಿ ಬೀದರನ ವಿಶಾಲ ಪಂಕ್ಷನ್ ಹಾಲನಲ್ಲಿ ನನ್ನ ತಂದೆ ತಾಯಿಯವರು ಎಲ್ಲಾ ಬಂಧು ಬಳಗದವರ ಸಮ್ಮುಖದಲ್ಲಿ ಮದುವೆ ಮಾಡಿ ಕೊಡ್ಡಿರುತ್ತಾರೆ. ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಾದ ಬೀದರನಲ್ಲಿರುವ ಕೆ.ಇ.ಬಿ. ಕಾಲೋನಿ ಗುಂಪಾ ಮನೆಯಲ್ಲಿ ನಾನು ನನ್ನ ಗಂಡ, ಅತ್ತೆ, ಮಾವ ಹಾಗೂ ನಾದಿನಿಯ ಜೊತೆಯಲ್ಲಿ ಇದ್ದಿರುತ್ತೇನೆ. ಮದುವೆಯಾದ ನಂತರ ನನಗೆ ನನ್ನ ಗಂಡ ಮತ್ತು ಗಂಡನ ಮನೆಯವರು ಅಂದಾಜು 2-3 ತಿಂಗಳು ಮಾತ್ರ ಚೆನ್ನಾಗಿ ನೋಡಿಕೊಂಡಿದ್ದು ನಂತರ ನನ್ನ ಗಂಡ ಸಂಗಮೇಶ ಇವರು ನನ್ನ ನಾದಿನಿಯ ಗಂಡನಾದ ಅಂಬರೀಶ ಇವರ ಜೊತೆಯಲ್ಲಿ ಸೇರಿ ದಿನಾ ಮನೆಗೆ ಕುಡಿದು ಬಂದು ನನ್ನೊಂದಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಮನೆ ಕೆಲಸ ಚೆನ್ನಾಗಿ ಬರುವುದಿಲ್ಲ, ಅಡುಗೆ ರುಚಿಯಾಗಿ ಮಾಡುವುದಿಲ್ಲ, ನನ್ನ ತಾಯಿಗೆ ದಿನಾ ಕಾಲು ಬಿದ್ದು ಅಡುಗೆ ಮಾಡುವುದನ್ನು ಕಲಿತುಕೊ ನಾನು ಅಳುತ್ತಾ ನನ್ನ ಗಂಡನಿಗೆ ಅಂಬರೀಶ ಇವರ ಜೊತೆ ಸೇರಿ ಯಾಕೆ ಸರಾಯಿ ಕುಡಿಯುತ್ತಿದ್ದೀರಿ ಮತ್ತು ಅಂಬರೀಶ ಇವರನ್ನು ಯಾಕೆ ನನ್ನ ಗಂಡನಿಗೆ ಸರಾಯಿ ಕುಟಿಯುವ ಚಟ ಹಾಕಿ ನಮ್ಮಿಬ್ಬರ ಸಂಸಾರ ಹಾಳು ಮಾಡುತ್ತಿದ್ದೀರಿ ಅಂತಾ ಕೇಳಿದಾಗ ದಿಕ್ಕಿಲ್ಲದ್ದಕ್ಕೆ ನಿನಗೆ ಮದುವೆ ಮಾಡಿಕೊಂಡು ಉಪಕಾರ ಮಾಡಿದ್ದೀನಿ ನೆನಪು ಇಟ್ಟುಕೊ ಎದುರು ಮಾತನಾಡುತ್ತಿ ಅಂತಾ ಅವಾಚ್ಯವಾಗಿ ಬೈದು ಕೂದಲು ಹಿಡಿದು ಹೊಡೆ-ಬಡೆ ಮಾಡಿ ಕುತ್ತಿಗೆ ಹಿಸುಕಿರುತ್ತಾನೆ. ಮತ್ತು ನನ್ನ ಅತ್ತೆಯಾದ ಅಂಜನಾ ಇವಳು ಸಹ ಮನೆಯಿಂದ ಹೊರಗೆ ಹಾಕು ನನಗೆ ಕೆಲಸದಲ್ಲಿ ಏನೇನೂ ಸಹಾಯ ಮಾಡುವುದಿಲ್ಲ, ಎಲ್ಲಿಂದ ಗಂಟು ಬಿದ್ದಿದ್ದಾಳೊ ಅಂತಾ ನನಗೆ ಗಲ್ಲದ ಮೇಲೆ ಹೊಡೆದು ಬೈಯ್ಯುವಾಗ ನನ್ನ

ನಾದಿನಿಯಾದ ವಿಜಯಲಕ್ಷ್ಮಿ ಇವಳು ಮತ್ತು ಇವಳ ಗಂಡನಾದ ಅಂಬರೀಶ ಇಬ್ಬರೂ ಕೂಡಿ ಈ ಹೆಂಗಸ್ಸಿಗೆ ಬಿಟ್ಟುಬಿಡು, ಸೂಳಿ ಆರಾಮವಾಗಿ ಬೆಡ್ ಮೇಲೆ ಕೂತು ರೆಸ್ಟ್ ಮಾಡುತ್ತಾಳೆ, ನೀನು ಇನ್ನೊಂದು ಮದುವೆ ಮಾಡಿಕೊ ಅವಳೂ ಇರುತ್ತಾಳೆ, ಇವಳೂ ಇರುತ್ತಾಳೆ ಅಂತಾ ಇವರೆಲ್ಲರೂ ಕೂಡಿ ನನ್ನ ಗಂಡನ ತಲೆ ತುಂಬಿ ನನಗೆ ದೈಹಿಕ, ಮಾನಸಿಕ ಕಿರುಕುಳ ನೀಡಿರುತ್ತಾರೆ. ಇವರು ಕೊಡುವ ತ್ರಾಸು, ತೊಂದರೆ ಬಗ್ಗೆ ನಾನು ನನ್ನ ತಂದೆಯಾದ ಗಂಗಶೆಟ್ಟಿ, ಅಣ್ಣಂದಿರಾದ ಸಂಗಮೇಶ ಮತ್ತು ಶಿವಲಿಂಗ ಹಾಗೂ ಸೋದರಮಾವನಾದ ಶರಣಪ್ಪ ತಂದೆ ಭೀಮರಾವ ಬಾಲಾದೆ ರವರಿಗೆ ಹೇಳಿದಾಗ ಇವರೆಲ್ಲರೂ ಕೂಡಿ ನನ್ನ ಗಂಡ ಮತ್ತು ಗಂಡನ ಮನೆಯವರಿಗೆ ತಿಳುವಳಿಕೆ ಹೇಳಿ ನನಗೆ ಸರಿಯಾಗಿ ನೋಡಿಕೊಳ್ಳಲು ಬುದ್ದಿಮಾತು ಹೇಳಿದರೂ ಸಹ ಅವರು ಕೇಳಿರುವುದಿಲ್ಲ, ಹೀಗಿರುವಾಗ ನನ್ನ ಗಂಡ ಹೈದ್ರಾಬಾದಿನಲ್ಲಿ ಕೆಲಸ ಮಾಡಲು ಹೋಗುವಾಗ ನಾನು ಸಹ ಅವರ ಜೊತೆಯಲ್ಲಿ ಹೋಗಿ ಹೈದ್ರಾಬಾದನಲ್ಲಿ ಬಾಡಿಗೆ ಮನೆಯಲ್ಲಿ ಉಳಿದುಕೊಂಡಿರುತ್ತೇನೆ ಅಲ್ಲಿಯೂ ಸಹ ನನ್ನ ಗಂಡ ನನಗೆ ಹೊಡೆ, ಬಡೆ ಮಾಡಿ ತ್ರಾಸು, ತೊಂದರೆ ಕೊಡುತ್ತಿದ್ದರಿಂದ ನಾನು ಕಿರುಕುಳ ತಾಳಲಾರದೇ ಪುನಃ ಬೀದರಕ್ಕೆ ನಮ್ಮ ತಂದೆ ತಾಯಿಯ ಮನೆಯಾದ ನಂದಿ ಕಾಲೋನಿಯಲ್ಲಿ ಬಂದು ಉಳಿದುಕೊಂಡಿರುತ್ತೇನೆ. ಹೀಗಿರುವಾಗ, ನನ್ನ ಗಂಡ ನನಗೆ ಕರೆಯಲು ಬರದೆ ಇದ್ದರಿಂದ ನಾನು ನನ್ನ ಗಂಡನ ಮನೆಯಲ್ಲಿ ಉಳಿದುಕೊಳ್ಳಲು ದಿನಾಂಕ 23-07-2022 ರಂದು ಮಧ್ಯಾಹ್ನ ಅಂದಾಜು 1-30 ಗಂಟೆಯ ಸುಮಾರಿಗೆ ನನ್ನ ಗಂಡನ ಮನೆಯಾದ ಬೀದರ ಕೆ.ಇ.ಬಿ. ಕಾಲೋನಿಯ ಮನೆಗೆ ಹೋಗಿ ನಾನು ಇಲ್ಲೆ ಇರುತೇನೆ ಅಂದಾಗ.ಗಂಡ ಸಂಗಮೇಶ ಮತ್ತು ಅತ್ತೆಯಾದ ಅಂಜನಾ ಇವರು ನಿನಗೆ ಗಂಡನ ನೆನಪು ಇವಾಗ ಬಂದಿದೆ ಏನು ಅಂತಾ ಅಂದು ನನ್ನ ಗಂಡ ನೀನು ಇಲ್ಲಿ ನಿಲ್ಲಬೇಡ ನಿಂತರೆ ನಿನಗೆ ಜೀವಂತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿ ನನಗೆ ತಲೆಯ ಮೇಲೆ ಹೊಡೆದಿರುತ್ತಾನೆ. ನನ್ನ ಅತ್ತೆ ನನಗೆ ಬಲಗಡೆ ಹೊಟ್ಟೆಯಲ್ಲಿ ಕೈಯಿಂದ ಹೊಡೆದಿರುತ್ತಾಳೆ. ಮತ್ತು ಅಲ್ಲೆ ಇದ್ದ ಗೀತಾ ತಂದೆ ಕಾಶಪ್ಪಾ ಚಿಟನೆ ಇವಳು ನನಗೆ ಬೈದು ನೀನು ಯಾರು ಇಲ್ಲಿಗೆ ಏಕೆ ಬಂದಿದ್ದಿ ಅಂತ ನೂಕಿ ಕೈಯಿಂದ ಹೊಡೆ ಬಡೆ ಮಾಡಿರುತ್ತಾಳೆ. ಇದನ್ನೆಲ್ಲಾ ನನ್ನ ಅಣ್ಣನಾದ ಸಂಗಮೇಶ ರವರ ಗೆಳೆಯನಾದ ವಸಂತ ಬಿರಾದಾರ ರವರು ನೋಡಿ ಜಗಳ ಬಿಡಿಸಿ ನನಗೆ ಕಳುಹಿಸಿರುತ್ತಾರೆ. ನಂತರ ನಾನು ನನ್ನ ತಂದೆ, ಹಾಗೂ ಅಣ್ಣಂದಿರು ಕೂಡಿ ಗಂಡನ ಚಿಕ್ಕಪ್ಪನಾದ ರಾಜಕುಮಾರ ತಂದೆ ತಮ್ಮಣ್ಣಾ ಹಾಗೂ ಇವರ ಮೊÀದಲನೇ ಹೆಂಡತಿಯಾದ ಲಕ್ಷ್ಮಿ @ ಮುನ್ನಾ ಹಾಗೂ ಎರಡನೇ ಹೆಂಡತಿಯಾದ ಪ್ರತಿಭಾ ಇವರುಗಳಿಗೆ ನನ್ನ ಗಂಡನ ಕಿರುಕುಳದ ಬಗ್ಗೆ ಹೇಳಿದಾಗ

ಅವರುಗಳು ನೀನು ಗಂಡನಿಗೆ ಬಿಟ್ಟು ಹೋಗಿದ್ದಿ ಯಾರಿಗೆ ಹೇಳ್ತಾ ಇದ್ದಿ ಅಂತಾ ನನಗೆ ಅವಾಚ್ಯ ಮಾತುಗಳನ್ನಾಡಿ ಜೀವದ ಬೆದರಿಕೆ ಹಾಕಿ ಇವರೂ ಸಹ ನನ್ನ ಗಂಡನ ಪರವಾಗಿ ಮಾತನಾಡಿರುತ್ತಾರೆ. ನಂತರ ನಾನು ಇದರ ಬಗ್ಗೆ ನಮ್ಮ ಮನೆಯಲ್ಲಿ ವಿಚಾರ ಮಾಡಿ ನನಗೆ ಹೊಡೆ ಬಡೆ ಮಾಡಿ ಅವಾಚ್ಯ ಬೈದು, ಜೀವದ ಬೆದರಿಕೆ ಹಾಕಿದ ಗಂಡನಾದ ಸಂಗಮೇಶ, ಅತ್ತೆಯಾದ ಅಂಜನಾ ಮತ್ತು ನಾದಿನಿಯಾದ ವಿಜಯಲಕ್ಷ್ಮಿ ಹಾಗೂ ನಾದಿನಿಯ ಗಂಡನಾದ ಅಂಬರೀಶ ಮತ್ತು ಗಂಡನ ಚಿಕ್ಕಪ್ಪನಾದ ರಾಜಕುಮಾರ ಮತ್ತು ಇವರ ಹೆಂಡತಿಯರಾದ ಲಕ್ಷ್ಮಿ @ ಮುನ್ನಾ ಹಾಗೂ ಎರಡನೇ ಹೆಂಡತಿಯಾದ ಪ್ರತಿಭಾ ಇವರುಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲು ವಿನಂತಿ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಜನವಾಡಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0080/2022 ಕಲಂ 87 ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ: 13/08/2022 ರಂದು ಪಿಎಸ್ಐ ರವರು ಸಿಬ್ಬಂದಿಯವರೊಂದಿಗೆ ಪೆಟ್ರೊಲಿಂಗ್ ಕರ್ತವ್ಯ ನಿರ್ವಹಿಸುತ್ತಾ ಜನವಾಡಾ ಗ್ರಾಮ ಪಂಚಾಯತ ಹತ್ತಿರ ಇದ್ದಾಗ ಮಮದಾಪೂರ ಗ್ರಾಮದ ಹನುಮಾನ ಮಂದಿರದ ಕಟ್ಟೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಇಸ್ಪಿಟ್ ಜೂಜಾಟದಲ್ಲಿ ತೊಡಗಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಪಂಚರು ಹಾಗು ಸಿಬ್ಬಂದಿಯವರೊಂದಿಗೆ ಮಮದಾಪೂರ ಗ್ರಾಮದ ಮರಗೆಮ್ಮಾ ಮಂದಿರದ ಹತ್ತಿರ ಹೋಗಿ ಮಂದಿರದ ಮರೆಯಾಗಿ ನಿಂತು ನೋಡಲಾಗಿ ಹನುಮಾನ ಮಂದಿರದ ಕಟ್ಟೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ 6 ಜನರು ಗುಂಪಾಗಿ ಕುಳಿತು ಹಣ ಪಣಕ್ಕೆ ಕಟ್ಟಿ ಅಂದರ-ಬಾಹರ್ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು 1650 ಗಂಟೆಗೆ ಪಂಚರ ಸಮಕ್ಷಮ ದಾಳಿ ಮಾಡಿ ಇಸ್ಪಿಟ್ ಜೂಜಾಟದಲ್ಲಿ ತೋಡಗಿದ 1] ನಾಗಶೇಟ್ಟಿ ತಂದೆ ಸಂಗ್ರಾಮಪ್ಪಾ ಚೌಳಿಖ್ಯಾಮಾ ವಯ: 65 ವರ್ಷ ಉ: ಒಕ್ಕಲುತನ ಜಾ:ಲಿಂಗಾಯತ ಸಾ: ಮಮದಾಪೂರ ಗ್ರಾಮ 2] ಗಣಪತಿ ತಂದೆ ಭೀಮರಾವ ಧೂಳೆ ವಯ: 43 ವರ್ಷ ಉ: ಒಕ್ಕಲುತನ ಜಾ:ಲಿಂಗಾಯತ ಸಾ: ಮಮದಾಪೂರ ಗ್ರಾಮ 3] ಬಾಬು ತಂದೆ ಚಂದ್ರಪ್ಪಾ ಖಂದಾರೆ ವಯ: 40 ವರ್ಷ ಉ: ಒಕ್ಕಲುತನ ಜಾ: ಲಿಂಗಾಯತ ಸಾ: ಮಮದಾಪೂರ ಗ್ರಾಮ 4] ಬಸವರಾಜ್ ತಂದೆ ಶಿವರಾಯ ಚಟನಾಳೆ ವಯ: 55 ವರ್ಷ ಉ: ಒಕ್ಕಲುತನ ಜಾ: ಲಿಂಗಾಯತ ಸಾ: ಮಮದಾಪೂರ ಗ್ರಾಮ 5] ಶಿವರಾಜ್ ತಂದೆ ಸಾದಪ್ಪಾ ಹಲಗೆನೋರ್ ವಯ: 50 ವರ್ಷ ಉ:

ಕೂಲಿಕೆಲಸ ಜಾ: ಕ್ರಿಶ್ಚನ್ ಸಾ: ಮಮದಾಪೂರ ಗ್ರಾಮ 6] ಬಸವರಾಜ್ ತಂದೆ ಕಂಟೆಪ್ಪಾ ಖಂದಾರೆ ವಯ: 60 ವರ್ಷ ಉ: ಒಕ್ಕಲುತನ ಜಾ:ಲಿಂಗಾಯತ ಸಾ: ಮಮದಾಪುರ ಗ್ರಾಮ ರವರಿಗೆ ಸಿಬ್ಬಂದಿಯವರ ಸಹಾಯದಿಂದ ಪಂಚರ ಸಮಕ್ಷಮ ಹಿಡಿದುಕೊಳ್ಳಲಾಯಿತು.ಸದರಿ ಆರೋಪಿತರಿಂದ ಇಸ್ಪಿಟ್ ಜೂಜಾಟಕ್ಕೆ ಬಳಸಿದ ಒಟ್ಟು ನಗದು ಹಣ 5800/- ರೂಪಾಯಿ ಮತ್ತು ಆರೋಪಿತರು ಜೂಜಾಟಕ್ಕೆ ಬಳಸಿದ 52 ಇಸ್ಪಿಟ್ ಎಲೆಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ಆರೋಪಿತರಿಗೆ ವಶಕ್ಕೆ ತೆಗೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಬೀದರ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0040/2022 ಕಲಂ. 78(3) ಕರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ 13/08/2022 ರಂದು ಸಾಯಂಕಾಲ 18:45 ಗಂಟೆ ಸುಮಾರಿಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಒಂದು ಖಚಿತ ಮಾಹಿತಿ ಬಂದಿದೆನೆಂದರೆ ಬೀದರ ನಗರ ಠಾಣಾ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಲಾಡ್ಜ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಿಂತು ಹೊಗಿ ಬರುವ ಜನರಿಗೆ ಕರೆದು ತನ್ನ ಹತ್ತಿರ ಮಟಕಾ ಜೂಜಾಟ ಆಡಿದರೆ 1/-ರೂ ಗೆ 90/-ರೂ ಕೂಡುತ್ತೇವೆ. ಅಂತ ಕರೆದು ಜನರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಮಟಕಾ ಚೀಟಿ ಬರೆದುಕೊಡುತ್ತಿದ್ದಾರೆ ಅಂತ ಖಚಿತ ಮಾಹಿತಿ ಬಂದ ಮೆರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಕರ್ನಾಟಕ ಲಾಡ್ಜ್ ಹತ್ತಿರ ಹೋಗಿ ಮರೆಯಲ್ಲಿ ನಿಂತು ನೋಡಲು ರಸ್ತೆಯ ಬದಿಯಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ನಿಂತು ಜನರಿಂದ ಹಣ ಪಡೆದು ಅಂಕಿ ಸಂಖ್ಯೆ ಬರೆದ ಚೀಟಿ ಬರೆದು ಕೊಡುತ್ತಿದ್ದ ಬಗ್ಗೆ ಖಚಿತ ಪಡಿಸಿಕೊಂಡು ಸದರಿಯವನ ಮೇಲೆ 19:30 ಗಂಟೆಗೆ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿತನಿಗೆ ಹಿಡಿದು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತಮ್ಮ ಹೆಸರು 1) ಕುಶಾಲರಾವ ತಂದೆ ಭೀಮರಾವ ಜೊತೆ ವಯ:57 ವರ್ಷ ಜಾ: ಲಿಂಗಾಯತ ಉ: ಕೂಲಿ ಕೆಲಸ ಸಾ: ಚೊಂಡಿ ಗಲ್ಲಿ ಬೀದರ ಅಂತ ತಿಳಿಸಿ ತಮ್ಮ ಹತ್ತಿರ ಮಟಕಾ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 260/-ರೂ ಮತ್ತು ಒಂದು ಬಾಲ ಪೆನ್ನು, ಮತ್ತು ಒಂದು ಮಟಕಾ ಚೀಟಿ ಹಾಜರು ಪಡಿಸಿದನು ಆಗ ಸದರಿ ಸ್ವತ್ತು ಪಂಚರ ಸಮಕ್ಷಮ ಜಪ್ತಿ ಮಾಡಿ ಆರೋಪಿತನಿಗೆ ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಮಾರ್ಕೆಟ ಪೊಲೀಸ್ ಠಾಣೆ ಬೀದರ ಪ್ರಕರಣ ಸಂಖ್ಯೆ: 52/2022 ಕಲಂ ಮನುಷ್ಯ ಕಾಣೆ :-**

ದಿನಾಂಕ 13-08-2022 ರಂದು 1930 ಗಂಟೆಗೆ ಪಿರ್ಯಾದಿ ಶ್ರೀ ಮಹ್ಮದ ಮಸ್ತಾನ ಖಾನ ತಂದೆ ಮಹ್ಮದ ಶರೀಫ ಖಾನ ವಯ 44 ವರ್ಷ ಜಾತಿ ಮುಸ್ಲಿಂ ಉ;ಕಾರ ಚಾಲಕ ಸಾ;ಟೀಚರ್ಸ್ ಕಾಲೋನಿ ಕಲ್ಲೂರ ರೋಡ ಹುಮನಾಬಾದ ಇವರು ಠಾಣೆಗೆ ಹಾಜರಾಗಿ ತನ್ನ ಬಾಯಿ ಮಾತಿನ ಹೇಳಿಕೆ ಫಿರ್ಯಾದು ನೀಡಿದ್ದು ಸಾರಾಂಶವೆನಂದರೆ, ನನಗೆ ಮೂರು ಜನ ಹೆಣ್ಣು ಮಕ್ಕಳು ಹಾಗು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನನ್ನ ಹಿರಿಯ ಮಗಳಾದ ಮುಸ್ಕಾನ ಫಾತಿಮಾ ವಯ 19 ವರ್ಷ ಇವಳು ಪಿ.ಯು.ಸಿ 2 ನೇ ವರ್ಷ ಪಾಸಾಗಿದ್ದು ಅವಳು ನೀಟ ಪರೀಕ್ಷೆ ಬರೆಯುವ ಕುರಿತು ನನ್ನ ಅತ್ತೆ ಮಾವನ ಮನೆ ಕನನ ಕಾಲೋನಿ ಬೀದರನಲ್ಲಿ ಇರುತ್ತಾಳೆ. ಸದರಿಯವಳು ದಿನಾಂಕ 12-08-2022 ರಂದು ರಾತ್ರಿ 0300 ಗಂಟೆಯ ಸುಮಾರಿಗೆ ಬೀದರ ನಗರದ ಕನನ ಕಾಲೋನಿಯ ತನ್ನ ಅಜ್ಜಿ ಮನೆಯಿಂದ ಕಾಣೆಯಾಗಿರುತ್ತಾಳೆ ಎಂದು ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಯಿತು.

**ಮನ್ನಾಏಖೆಳ್ಳಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 0083/2022 ಕಲಂ. 279, 338 ಐಪಿಸಿ ಜೊತೆ 187 ಐ.ಎಂ.ವಿ ಕಾಯ್ದೆ :-**

ದಿನಾಂಕ: 12/08/2022 ರಂದು ಫಿರ್ಯಾದಿ ಗಾಯಾಳು ಶ್ರೀ ಮಹ್ಮದ ಮಸೂದ ತಂದೆ ಮಹ್ಮದ ಗೌಸೊದ್ದೀನ ಶೇಕ ವಯ 32 ವರ್ಷ ಜಾತಿ:ಮುಸ್ಲಿಂ ಉದ್ಯೋಗ: ಐಟಿ ಕಂಪನಿಯಲ್ಲಿ ಕೆಲಸ ಸಾ|| ಬಿ.ಬಿ ಗಲ್ಲಿ ಹುಮನಾಬಾದ ಇವರು ಮನ್ನಾಏಖೇಳ್ಳಿ ಗ್ರಾಮದ ಸಂಬಂಧಿಕರ ಮನೆಯಲ್ಲಿ ಕಾರ್ಯಕ್ರಮ ಇದ್ದ ಪ್ರಯುಕ್ತ ಹಿರೋ ಹೊಂಡಾ ಮೊಟಾರ ಸೈಕಲ್ ನಂ: ಕೆಎ:39/ಕೆ-2261 ಮೇಲೆ ಹುಮನಾಬಾದದಿಂದ ಮನ್ನಾಏಖೇಳ್ಳಿ ಗ್ರಾಮಕ್ಕೆ ಬಂದು ಜರೀನಾ ಫಂಕ್ಷೆÀ್ಷನ ಹಾಲದಲ್ಲಿ ಸಂಬಂಧಿಕರ ಕಾರ್ಯಕ್ರಮವನ್ನು ಮುಗಿಸಿಕೊಂಡು ಮರಳಿ ಮನ್ನಾಏಖೇಳ್ಳಿ ಗ್ರಾಮದಿಂದ ಹುಮನಾಬಾದಕ್ಕೆ ನನ್ನ ಹಿರೋ ಹೊಂಡಾ ಮೊಟಾರ ಸೈಕಲ್ ನಂ: ಕೆಎ:39/ಕೆ-2261 ನೇದ್ದು ಚಲಾಯಿಸಿಕೊಂಡು ಹೊಗುವಾಗ ಎನ್.ಎಚ್-65 ರೋಡ ಮಂಗಲಗಿ - ತಾಳಮಡಗಿ ಗ್ರಾಮದ ಮಧ್ಯ ತಾಳಮಡಗಿ ಬ್ರಿಡ್ಜ ಸ್ವಲ್ಪ ಹಿಂದೆ ರೋಡಿನ ಮೇಲೆ ಸೈಡಿಗೆ ಹೊಗುವಾಗ ಹಿಂದಿನಿಂದ ಅಂದರೆ ಮಂಗಲಗಿ ಗ್ರಾಮದ ಕಡೆಯಿಂದ ಒಬ್ಬ ಕಾರ ಚಾಲಕನ್ನು ತನ್ನ ಕಾರನ್ನು ಅತಿವೇಗ ಹಾಗು ನಿಷ್ಕಾಳಜೀತನದಿಂದ ಹಾಗು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಫಿರ್ಯಾದಿಯ ಮೊಟಾರ ಸೈಕಲಗೆ

ಹಿಂದಿನಿಂದ ಡಿಕ್ಕಿ ಮಾಡಿದ್ದು, ಆಗ ಸಮಯ ರಾತ್ರಿ 10:15 ಪಿ.ಎಂ ಗಂಟೆಯಾಗಿದ್ದು, ಅಪಘಾತದಿಂದ ಫಿರ್ಯದಿಯು ಮೊಟಾರ ಸೈಕಲ್ ಸಮೇತ ರೋಡಿನ ಮೇಲೆ ಬಿದ್ದಾಗ ಬಲ ತಲೆಗೆ ಭಾರಿ ರಕ್ತಗಾಯ, ಎಡ ತಲೆ ಹಿಂದೆ ಸಾದಾ ರಕ್ತಗಾಯ, ಬಲ ತೋಡೆಗೆ ಗುಪ್ತಗಾಯ, ಎಡ ಮೋಳಕಾಲಿಗೆ ತರಚಿದ ರಕ್ತಗಾಯ, ಎಡ ಪಾದದ ಮೇಲೆ ತರಚಿದ ರಕ್ತಗಾಯ, ಬಲ ಕೈ ಬೆರಳುಗಳಿಗೆ ತರಚಿದ ಗಾಯವಾಗಿರುತ್ತವೆ. ನನ್ನ ತಲೆಗೆ ಭಾರಿ ಗಾಯವಾದ್ದರಿಂದ ಸ್ವಲ್ಪ ಪ್ರಜ್ಞಾಹೀನನಾಗಿದ್ದಾಗ ಡಿಕ್ಕಿ ಮಾಡಿದ ಕಾರಿನಿಂದ ಒಬ್ಬ ವ್ಯಕ್ತಿ ಬಂದು ನನಗೆ ಎಬ್ಬಿಸಿ ರೋಡಿನ ಬದಿಗೆ ಕುಡಿಸಿ ಕಾರ ಸೈಡಿಗೆ ತೆಗೆದುಕೊಳ್ಳುತ್ತೇನೆ ಅಂತ ಹೇಳಿ ಕಾರ ಸಮೇತ ಓಡಿಸಿಕೊಂಡು ಹೊಗಿರುತ್ತಾನೆ. ರಾತ್ರಿಯಾದರಿಂದ ಹಾಗು ನಾನು ಸ್ವಲ್ಪ ಪ್ರಜ್ಞಾಹೀನನಾದ್ದರಿಂದ ಕಾರ ನಂಬರ ನೋಡಿರುವದಿಲ್ಲಾ, ಅಪಘಾತಪಡಿಸಿದ ಕಾರ ಎಸ್.ಯು.ವಿ ಕಾರದಂತೆ ಕಂಡುಬದ್ದಿದ್ದು, ಕಾರು ಡಾರ್ಕ/ಬ್ಲ್ಯಾಕ್/ಬ್ರೋನ್ ಬಣ್ಣದ ತರಹ ಇರುತ್ತದೆ. ನಂತರ ನನಗೆ ಸ್ವಲ್ಪ ಪ್ರಜ್ಞಾ ಬಂದ ನಂತರ ನನ್ನ ಗೇಳೆಯನಾದ ಸೊಹೇಲನಿಗೆ ಕರೆ ಮಾಡಿದಾಗ ಸೊಹೇಲನ ಗೇಳೆಯನಾದ ಆಶು ಪಟೇಲ ತಾಳಮಡಗಿ ರವರು ಘಟನೆ ಸ್ಥಳಕ್ಕೆ ಬಂದು 108 ಅಂಬುಲೇನ್ಸಗೆ ಕರೆಮಾಡಿ ಚಿಕಿತ್ಸೆ ಕುರಿತು ನನಗೆ ಹುಮನಾಬಾದ ಸರಕಾರಿ ಆಸ್ಪತ್ರೆಗೆ ಹೊಗಿ ಚಿಕಿತ್ಸೆ ಪಡೆದುಕೊಂಡು ವೈಧ್ಯರ ಸಲಹೆ ಮೇರೆಗೆ ಅದೇ 108 ಅಂಬುಲೇನ್ಸದಲ್ಲಿ ಹೆಚ್ಚಿನ ಚಿಕಿತ್ಸೆ ಕುರಿತು ಕಲಬುರ್ಗಿ ಪಿ.ಜಿ ಶಾಹ ಖಾಸಗಿ ಆಸ್ಪತ್ರೆಗೆ ತಂದು ಸೇರಿಕ ಮಾಡಿರುತ್ತಾರೆ. ಅಪಘಾತ ಪಡಿಸಿದ ಕಾರಗೆ ನೊಡಿದರೆ ಗುರ್ತಿಸುತ್ತೇನೆ. ಅಂತ ಕೊಟ್ಟ ಫಿರ್ಯಾದು ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.